5) ರೈತರು ಬೆಳೆದ ತೋಟಗಾರಿಕೆ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗುವಂತಾಗಲು ಹಾಪ್‌ಕಾಮ್ಸ್, ಬೆಂಗಳೂರು ಮಾದರಿಯಲ್ಲಿ ಗುಲ್ಬರ್ಗಾ ವಿಭಾಗ ಮಟ್ಟದ ಹಾಪ್ ಕಾಮ್ಸ್ ಸಂಘವನ್ನು ಅಭಿವೃದ್ಧಿಪಡಿಸಲಾಗುವುದು. ಈ ಸಂಘದಲ್ಲಿ ಬೀದರ್ ಜಿಲ್ಲೆಯ ತೋಟಗಾರಿಕೆ ಉತ್ಪನ್ನ ಮಾರಾಟ ಮತ್ತು ಸಹಕಾರ ಸಂಘವು ಸದಸ್ಯ ಸಂಘವಾಗಿರುತ್ತದೆ. ಹಾಗೂ ಜಿಲ್ಲಾ ಮಟ್ಟದ ಈ ಸಂಘಕ್ಕೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಒಟ್ಟು 23.25 ಲಕ್ಷಗಳ ಕಾರ್ಯಕ್ರಮವಿದ್ದು ಈಗಾಗಲೇ ರೂ. 11.174 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

6) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ರೈತರಿಗೆ ಹಣ್ಣಿನ ತೆಂಗಿನ ತೋಟಗಳ ನಿರ್ಮಾಣ ಹಾಗೂ 2 ವರ್ಷ ಪೋಷಣೆಗಾಗಿ ಸಹಾಯಧನವನ್ನು ನೀಡಲು ರೂ. 13.94 ಲಕ್ಷ ಖರ್ಚು ಮಾಡುವ ಕಾರ್ಯಕ್ರಮವಿದ್ದು ಈ ಯೋಜನೆಯಡಿಯಲ್ಲಿ 1214 ಹೆಕ್ಟೇರ್ ಪ್ರದೇಶ ವಿಸ್ತರಣೆ ಕೈಗೊಳ್ಳಲಾಗುವುದು.

ಒಟ್ಟಾರೆ ಜಿಲ್ಲೆಯಲ್ಲಿ 1994-95ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ತೋಟಗಾರಿಕೆ ಅಭಿವೃದ್ಧಿಗಾಗಿ ಒಟ್ಟು 1.0 ಕೋಟಿ ರೂ.ಗಳ ಆಯವ್ಯಯವಿರುತ್ತದೆ.

ಹೊಂಬಳ್ಳಿ ಯೋಜನೆಯಡಿಯಲ್ಲಿ ಒಣ ತೋಟಗಾರಿಕೆ ಬೇಸಾಯದ ಪ್ರಮುಖ ಹಣ್ಣಿನ ಬೆಳೆಗಳಾದ ಮಾವು, ಸಪೋಟ, ದಾಳಿಂಬೆ, ನಿಂಬೆ, ಹಲಸು ಮತ್ತು ಹುಣಸೆ ಬೆಳೆಗಳನ್ನು 150 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬೀದರ್ ತಾಲ್ಲೂಕಿನಲ್ಲಿ 19940-95ನೇ ಸಾಲಿಗೆ 150 ಹೆಕ್ಟೇರ್ ಪ್ರದೇಶ ವಿಸ್ತರಣೆ ಕೈಗೊಳ್ಳಲು ರೂ. 9.974 ಲಕ್ಷಗಳ ಆರ್ಥಿಕ ಅನುದಾನವನ್ನು ಒದಗಿಸಲಾಗಿದೆ.

ತಾಲ್ಲೂಕು	ಅನುಷ್ಠಾನ ಗೊಳಿಸುವ ವರ್ಷ	ಉದ್ದೇಶಿಸಿರುವ ಪ್ರದೇಶ ವಿಸ್ತರಣೆ(ಹೆ.)
1.ಬೀದರ್	94.95 ರಿಂದ 96-97	500
2.ಔರಾದ್	96-97 ಮತ್ತು 97-98	400
3.ಭಾಲ್ಕಿ	97-98 ಮತ್ತು 98-99	250
4.ಹುಮ್ನಾಬಾದ್	98-99 ಮತ್ತು 99-2000	250
5.ಬಸವಕಲ್ಯಾಣ	99-2000	100
	ಒಟ್ಟು	1500 ಹೆಕ್ಟೇರ್

ನಾರಂಜ ಸಹಕಾರ ಸಕ್ಕರೆ ಕಾರ್ಖಾನೆ, ಬೀದರ್ ಪ್ರಗತಿ

183 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾರಂಜ ಸಹಕಾರ ಸಕ್ಕರೆ ಕಾರ್ಖಾನೆಗೆ ಒಟ್ಟು ಎಷ್ಟು ಹಣವನ್ನು ರೈತರಿಂದ ಸಂಗ್ರಹಿಸಲಾಗಿದೆ?

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್‌ನಿಂದ ಸದರಿ ಸಹಕಾರ ಸಕ್ಕರೆ ಕಾರ್ಖಾನೆಗೆ 1993-94ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು? ಹಾಗೂ ಖರ್ಚು ಮಾಡಿದ ಹಣವೆಷ್ಟು?

ಆ) ಇಲ್ಲಿಯವರೆಗೆ ಈ ಕಾರ್ಖಾನೆಯನ್ನು ಸ್ಥಾಪಿಸುವ ಸಲುವಾಗಿ ಕಾಮಗಾರಿಗಾಗಿ ಖರ್ಚು ಮಾಡಿದ ಹಣವೆಷ್ಟು?

ಈ) 1994-95ರಲ್ಲಿ ಸದರಿ ಕಾರ್ಖಾನೆಗೆ ಹೆಚ್.ಕೆ.ಡಿ.ಬಿ. ಯವರು ನೀಡಿರುವ ಹಣವೆಷ್ಟು?

ಉ) ಕಾರ್ಖಾನೆಯ ಕಾಮಗಾರಿಗಳ ಪ್ರಗತಿ ಮಂದಗತಿಯಿಂದ ಸಾಗುತ್ತಿರುವುದು ನಿಜವಲ್ಲವೆ?

ಊ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ತ್ವರಿತಗತಿಯಿಂದ ಕೈಗೊಂಡು ಗುರಿಯನ್ನು ಮುಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) :

ಅ) ದಿನಾಂಕ 30-6-94ರ ವರೆಗೆ ಒಟ್ಟು ರೂ. 177.80 ಲಕ್ಷ ಹಣವನ್ನು ಸಂಗ್ರಹಿಸಲಾಗಿದೆ.

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್‌ನಿಂದ ಸದರಿ ಸಹಕಾರ ಸಕ್ಕರೆ ಕಾರ್ಖಾನೆಗೆ 1993-94ನೇ ಸಾಲಿನಲ್ಲಿ ಯಾವ ಹಣವನ್ನೂ ಬಿಡುಗಡೆ ಮಾಡಿರುವುದಿಲ್ಲ. ಇದರಿಂದ ಖರ್ಚು ಮಾಡಿದ ಹಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕಾರ್ಖಾನೆಯನ್ನು ಸ್ಥಾಪಿಸುವ ಸಲುವಾಗಿ ಕಾಮಗಾರಿಗಾಗಿ ದಿನಾಂಕ 15-8-94ರ ವರೆಗೆ ರೂ. 2,50,01,288.00 ಖರ್ಚು ಮಾಡಲಾಗಿದೆ.

ಈ) 1994-95ರ ಸಾಲಿನಲ್ಲಿ ಇಲ್ಲಿಯವರೆಗೂ ಹೆಚ್.ಕೆ.ಡಿ.ಬಿ. ಯವರು ಕಾರ್ಖಾನೆಗೆ ಯಾವ ಹಣವನ್ನೂ ನೀಡಿರುವುದಿಲ್ಲ.

ಉ) ನಿಜ

ಊ) ಕಾರ್ಖಾನೆಯ ಕಾಮಗಾರಿಯೂ ಸೇರಿದಂತೆ ಒಟ್ಟಾರೆ ಯೋಜನೆಯನ್ನು ಪೂರ್ಣಗೊಳಿಸುವ ಗುರಿಯನ್ನು ಮುಟ್ಟಬೇಕಾದರೆ ಉನ್ನತ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರು ಆಗಬೇಕಾಗಿರುತ್ತದೆ. ಸದರಿ ಸಂಸ್ಥೆಗಳಿಂದ ಸಾಲವನ್ನು ಮಂಜೂರು ಮಾಡಿಸುವ ಏರ್ಪಾಡು ಮಾಡಲು ಸರ್ಕಾರವು ತೀವ್ರ ಪ್ರಯತ್ನಗಳನ್ನು ನಡೆಸಿವೆ.

ಶಿಗ್ಗಾಂವದಲ್ಲಿ ಅಗ್ನಿಶಾಮಕದಳ ಪ್ರಾರಂಭಿಸುವ ಕುರಿತು

629 - ಶ್ರೀ ಮಂಜುನಾಥ್ ಸಿ. ಕೂನ್ನೂರ (ಶಿಗ್ಗಾಂವ್) : ಮಾನ್ಯ ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್‌ಗೆ ಅಗ್ನಿಶಾಮಕ ದಳ ಎಂದು ಮಂಜೂರಾಗಿದೆ?

ಆ) ಅದನ್ನು ಎಂದು ಪ್ರಾರಂಭಿಸಲಾಗುವುದು?

ಇ) ಸದರಿ ಅಗ್ನಿಶಾಮಕ ದಳ ಪ್ರಾರಂಭಿಸಲು ಇರುವ ಅಡೆತಡೆಗಳೇನು?

ಈ) ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಡಾ॥ ಆರ್.ಬಿ. ಚೌಧರಿ (ಬಂಧೀಖಾನೆ ರಾಜ್ಯ ಸಚಿವರು) :

ಅ) ಸರ್ಕಾರದ ಆದೇಶ ಸಂಖ್ಯೆ ಒಇ 53 ಕಅಸೇ 93, ದಿನಾಂಕ : 22-12-93ರಲ್ಲಿ ಧಾರವಾಡ ಜಿಲ್ಲೆಯ ಶಿಗ್ಗಾಂವ ಪಟ್ಟಣದಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಮಂಜೂರಾತಿಯನ್ನು ನೀಡಲಾಗಿದೆ.